

ಶಾಂತರಸ ಅವರ ಕುಟುಂಬ

ಕೊಡುವುದ್ನು ನೋಡುತ್ತಿದ್ದೇವೆ. ಹೈದ್ರಾಬಾದ್ ಕರ್ನಾಟಕದ ಕಥೆಗಳು, ಕಾವ್ಯಗಳು, ಗಜಲುಗಳು ಇಂದು ನಾಡಿನಾದ್ಯಂತ ಗಮನ ಸೆಳೆಯುತ್ತವೆ. ಇದು ಶಾಂತರಸರು ಅವಿರತವಾಗಿ ಆಗ ದುಡಿದ ಫಲದ ಪ್ರತಿಫಲ.

ನನ್ನಣ್ಣ ಎಸ್.ಜಿ. ಸ್ವಾಮಿ ಅವರಿಗೆ ಕಾಲೇಜಿನಲ್ಲಿ ಗುರುವಾಗಿದ್ದ ಶಾಂತರಸರು, ಆತ ಉತ್ತಮ ಕವಿಯಾಗಲು ಕಾರಣಕರ್ತರಾಗಿದ್ದರು. ತಾವು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಆತನನ್ನು ಅಕಾಡೆಮಿಯ ಸದಸ್ಯರನ್ನಾಗಿ ಮಾಡಿದ್ದರು. ನನ್ನಣ್ಣ ಶಾಂತರಸರ ಆರೋಗ್ಯ, ಪ್ರವಾಸ ಸೇರಿದಂತೆ ಒಟ್ಟಾರೆ ಅವರ ಕಾಳಜಿಯನ್ನು ಮಗನಂತೆ ಕೊನೆಯವರೆಗೂ ಕಾಳಜಿ ವಹಿಸಿ ನೋಡಿಕೊಂಡಿದ್ದರು. ಅಣ್ಣ ಅಕಾಲಿಕ ಮರಣಹೊಂದಿದಾಗ ಶಾಂತರಸರು ದುಃಖಿತರಾಗಿದ್ದರು. 'ನಾನು ನನ್ನ ಕೈ ಮತ್ತು ಕಾಲುಗಳನ್ನು ಕಳೆದುಕೊಂಡೆ' ಎಂದು ಸಂಕಟ ಪಟ್ಟಿದ್ದರು.

ನಾನು ಶಾಂತರಸರನ್ನು ಮೊದಲು ನೋಡಿದ್ದು ಗೋಕಾಕ್ ಚಳವಳಿಯ ಆರಂಭ ಕಾಲದಲ್ಲಿ. ಆಗ ಗೋಕಾಕ್ ಚಳವಳಿಯ ಕಾವು ಜೋರಾಗಿತ್ತು. ಕರ್ನಾಟಕ ಸಂಘ - ರಾಯಚೂರಿನಲ್ಲಿ ದಿನಾಲು ಉಪವಾಸ ಸತ್ಯಾಗ್ರಹ ನಡೆಯುತ್ತಿತ್ತು. ಆಗ ನಾನು ಐದನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದೆ. ಆ ಸಂದರ್ಭದಲ್ಲಿ ಎಸ್.ಜಿ. ಸ್ವಾಮಿಯವರು, ನಾನು ಹಾಗೂ ಸಹೋದರ ವಿರುಪಯ್ಯ ಖಂಡಿಮಠ ಅವರಿಗೆ ಒಂದು ದಿನದ ಉಪವಾಸ ಸತ್ಯಾಗ್ರಹ ಕೂಡ್ರುವ ಅವಕಾಶ ಕಲ್ಪಿಸಿದ್ದರು. ಅದರ ನೇತೃತ್ವವನ್ನು ಶಾಂತರಸರು ವಹಿಸಿದ್ದರು. ತೆಳ್ಳಗೆ ಅತ್ಯಂತ ತೀಕ್ಷ್ಣ ಕೆಂಪುಬಣ್ಣದ ಶಾಂತರಸರನ್ನು ಅಂದೇ ನಾನು ನೋಡಿದ್ದು. ಆಗ ನನಗೆ, ಈ ಮನುಷ್ಯ ಈ ಲೋಕದವರು ಅಲ್ಲ ಅನ್ನಿಸಿತ್ತು. ಅಂದು ಉಪವಾಸ ಮುಗಿದ ಸಂಜೆ ನಮಗೆ ಲಿಂಬೆಹಣ್ಣಿನ ಪಾನಕವನ್ನು ಕುಡಿಸಿ ಮನೆಗೆ ಬೀಳ್ಕೊಟ್ಟಿದ್ದರು. ಅಲ್ಲಿಂದ ಪದೇ ಪದೇ ಅವರ ಮನೆಗೆ ಹೋಗುತ್ತಿದ್ದೆ. ಬರಹಗಾರರ ಮುಂದೆ ಶಾಂತರಸರು ತಮ್ಮ ಕಥೆ-ಕಾವ್ಯ ಓದುತ್ತಿದ್ದುದನ್ನು ಕೇಳುತ್ತಿದ್ದೆ.

ಶಾಂತರಸರು ಕರ್ನಾಟಕ ಸಾಹಿತ್ಯ ಅಕಾಡೆಮಿ